

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‍ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‍ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‍ನ **'ಮಸ್ಜಿದ್ ಮುಬಾರಕ್'** ನಿಂದ **03–12–2021** ರಂದು ನೀಡಿದ **ಜುಮುಅ ಖುತ್‍ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‍ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಂದು ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‍ಹುರ ಪ್ರಸ್ತಾಪ ಶುರುವಾಗುವುದು. ಇಸ್ಲಾಮಿಗೆ ಮುಂಚೆ ಅವರ ಹೆಸರು ಅಬ್ದುಲ್‍ಕಅ್‍ಬ ಎಂದಾಗಿತ್ತು. ಅದನ್ನು ಹಝ್ರತ್ ಪೈಗಂಬರ್(ಸ) ಬದಲಾಯಿಸಿ ಅಬ್ದುಲ್ಲಾಹ್ ಎಂದು ಹೆಸರಿಸಿದರು. ಅವರ ಉಪನಾಮ ಅಬೂಬಕರ್ ಎಂದೂ ಬಿರುದುನಾಮಗಳು **"ಅತೀಖ್"** ಮತ್ತು **"ಸಿದ್ದೀಖ್"** ಎಂದೂ ಆಗಿದ್ದುವು. ಅಬ್ರಹನ ಆನೆ ಸೈನ್ಯವು ಮಕ್ಕದ ಮೇಲೆ ದಾಳಿ ನಡೆಸಿದ ಘಟನೆಯ ಎರಡು ವರ್ಷ ಆರು ತಿಂಗಳ ನಂತರ ಕ್ರಿ.ಶ. 573ರಲ್ಲಿ ಅವರ ಜನನವಾಯಿತು. ಹಝ್ರತ್ ಅಬೂಬಕರ್(ರ)ರ ಸಂಬಂಧವು ಖುರೈಶ್ ಗೋತ್ರವಾದ ಬನೂತೈಮ್ ಬಿನ್ ಮುರ್ರತ್‍ನೊಂದಿಗೆ ಆಗಿತ್ತು. ಅವರ ತಂದೆಯ ಹೆಸರು ಉಸ್ಮಾನ್ ಬಿನ್ ಆಮಿರ್ ಎಂದಾಗಿತ್ತು ಮತ್ತು ತಂದೆಯ ಉಪನಾಮ ಅಬೂಖಹಾಫ ಎಂದಾಗಿತ್ತು. ಹಝ್ರತ್ ಅಬೂಬಕರ್(ರ)ರ ತಾಯಿಯ ಹೆಸರು ಸಲ್ಮಾ ಬಿನ್ತ್ ಸಖ್ರ್ ಬಿನ್ ಆಮಿರ್ ಹಾಗೂ ಉಪನಾಮ ಉಮ್ಮುಲ್‍ಖೈರ್ ಎಂದಾಗಿತ್ತು. ಹಝ್ರತ್ ಅಬೂಬಕರ್‍ರ ವಂಶಾವಳಿಯು ಏಳನೇ ತಲೆಮಾರಿನಲ್ಲಿ ಮುರ್ರ ಎಂಬವರ ಮುಖಾಂತರ ಹಝ್ರತ್ ಪೈಗಂಬರ್(ಸ)ರೊಂದಿಗೆ ಬಂದುಸೇರುತ್ತದೆ. ಹಝ್ರತ್ ಅಬೂಬಕರ್(ರ)ರ ತಂದೆತಾಯಂದಿರು ಅವರ ಮರಣದ ನಂತರವೂ ಜೀವಂತವಾಗಿದ್ದರು. ಅವರಿಬ್ಬರೂ ತಮ್ಮ ಮಗನಾದ ಹಝ್ರತ್ ಅಬೂಬಕರ್(ರ)ರ ವಾರಸು ಸೊತ್ತಿನಿಂದ ತಮ್ಮ ಪಾಲನ್ನು ಪಡೆದಿದ್ದರು. ಹಝ್ರತ್ ಅಬೂಬಕರ್(ರ)ರ ಮರಣದ ನಂತರ ಮೊದಲು ಅವರ ತಾಯಿಯ ನಿಧನವಾಯಿತು. ಅನಂತರ ಅವರ ತಂದೆ ಹಿಜರಿ 14ರಲ್ಲಿ 97ನೇ ವಯಸ್ಸಿನಲ್ಲಿ ನಿಧನರಾದರು. ಅವರ ತಂದೆ ಮಕ್ಕಾ ವಿಜಯದ ಸಂದರ್ಭದಲ್ಲಿ ಇಸ್ಲಾಂ ಧರ್ಮ ಸ್ವೀಕರಿಸಿದ್ದರು. ಅವರ ತಾಯಿ ಇಸ್ಲಾಮಿನ ಆರಂಭ ಕಾಲದಲ್ಲೇ ಮುಸ್ಲಿಮರಾಗಿದ್ದರು. ಹಝ್ರತ್ ಪೈಗಂಬರ್(ಸ) ತನ್ನ ಕೇವಲ 38 ಸಹಾಬಿಯರೊಂದಿಗೆ ರಹಸ್ಯವಾಗಿ ದಾರೆಅರ್ಕಮಿನಲ್ಲಿ ಆರಾಧನೆ ಮಾಡುತ್ತಿದ್ದ ಕಾಲದಲ್ಲಿ, ಹಝ್ರತ್ ಅಬೂಬಕರ್(ರ) ವಿನಂತಿಸುತ್ತಾ ಹಝ್ರತ್ ಪೈಗಂಬರ್(ಸ)ರನ್ನು ಮಸ್ಜಿದ್ ಹರಾಮಿಗೆ ಕೊಂಡುಹೋದರು. ಅಲ್ಲಿ ಅವರು ಜನರನ್ನು ಅಲ್ಲಾಹನ ಕಡೆಗೆ ಆಮಂತ್ರಣ ನೀಡಿದರು. ಆಗ ಅಲ್ಲಿದ್ದ ಜನರು ಧಾವಿಸಿ ಮುಸ್ಲಿಮರನ್ನು ಬಹಳ ಹೀನಾಯವಾಗಿ ಹೊಡೆದರು. ಹಝ್ರತ್ ಅಬೂಬಕರ್(ರ)ರನ್ನು ಕಾಲಿನಡಿಯಲ್ಲಿ ಹಾಕಿ ಎಷ್ಟು ತುಳಿಯಲಾಯಿತು ಎಂದರೆ, ಅವರು ಮರಣವನ್ನಪ್ಪುವರು ಎಂಬುದರಲ್ಲಿ ಸಂಶಯ ಬಾಕಿಯುಳಿದಿರಲಿಲ್ಲ. ಅವರಿಗೆ ಸ್ವಲ್ಪ ಪ್ರಜ್ಞೆ ಬಂದಾಗ ಮೊತ್ತಮೊದಲು ಅವರು ಹಝ್ರತ್ ಪೈಗಂಬರ್(ಸ)ರ ಅವಸ್ಥೆಯ ಬಗ್ಗೆ ಕೇಳಿದರು. ಅನಂತರ ತನ್ನ ತಾಯಿಯನ್ನು ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರ ಸಹೋದರಿಯಾದ ಉಮ್ಮೇ ಜಮೀಲ್(ರ)ರ ಬಳಿಗೆ ಕಳುಹಿಸಿದರು. ಉಮ್ಮೇ ಜಮೀಲ್(ರ) ಹಝ್ರತ್ ಅಬೂಬಕರ್(ರ)ರ ಬಳಿಗೆ ಬಂದರು. ಹಝ್ರತ್ ಅಬೂಬಕರ್(ರ)ರ ತಾಯಿಯ ಮುಂದೆ ಹಝ್ರತ್ ಪೈಗಂಬರ್(ಸ)ರ ಕುರಿತು ಹೇಳುವುದರಿಂದ ಹೆದರುತ್ತಿದ್ದರು. ಹೇಳಲು ಬಯಸುವ ರಹಸ್ಯವನ್ನು ಅವರ ತಾಯಿ ಬಯಲು ಮಾಡಲಿಕ್ಕಿಲ್ಲವೆಂದು ಹಝ್ರತ್ ಅಬೂಬಕರ್ ಅವರಿಗೆ ಭರವಸೆ ಕೊಟ್ಟರು. ಹಝ್ರತ್ ಪೈಗಂಬರ್(ಸ) ದಾರೆಅರ್ಕಮಿನಲ್ಲಿ ಕ್ಷೇಮವಾಗಿದ್ದಾರೆ ಎಂದು ಉಮ್ಮೇ ಜಮೀಲ್(ರ) ಹೇಳಿದರು. ಆಗ ಹಝ್ರತ್ ಅಬೂಬಕರ್(ರ) ಹೇಳಿದರು: ಅಲ್ಲಾಹನಾಣೆ, ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾಗುವ ವರೆಗೂ ನಾನು ಆಹಾರ ಪಾನೀಯವನ್ನು ಸೇವಿಸುವುದಿಲ್ಲ. ಹಝ್ರತ್ ಅಬೂಬಕರ್(ರ) ಅದೇ ಸ್ಥಿತಿಯಲ್ಲಿ ಇತರರ ಆಸರೆಯಿಂದ ಕುಂಟುತ್ತಾ ಹಝ್ರತ್ ಪೈಗಂಬರರ ಸನ್ನಿಧಿಯಲ್ಲಿ ಹಾಜರಾದರು. ಆ ವೇಳೆ ಹಝ್ರತ್ ಅಬೂಬಕರ್(ರ) ತೀವ್ರ ದುಃಖದಲ್ಲಿದ್ದರು. ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರರ ಸ್ಥಿತಿಯನ್ನು ಕಂಡಾಗ ಅವರನ್ನು ಚುಂಬಿಸಲು ಬಾಗಿದರು. ಹಝ್ರತ್ ಅಬೂಬಕರ್(ರ) ತನ್ನ ತಾಯಿಯ ಉತ್ತಮ ವರ್ತನೆಯ ಬಗ್ಗೆ ಪ್ರಸ್ತಾಪಿಸಿದರು ಮತ್ತು ಹಝ್ರತ್ ಪೈಗಂಬರರ ಮುಖಾಂತರ ಅವರ ತಾಯಿ ಬೆಂಕಿಯಿಂದ ಪಾರಾಗಬಹುದು ಎಂದು ಹೇಳಿದರು. ಆಗ ಹಝ್ರತ್ ಪೈಗಂಬರ್(ಸ) ದುಆ ಮಾಡಿದರು ಮತ್ತು ಹಝ್ರತ್ ಅಬೂಬಕರ್(ರ)ರ ತಾಯಿಯೊಡನೆ ಇಸ್ಲಾಂ ಸ್ವೀಕರಿಸಲು ಹೇಳಿದರು. ಹೀಗೆ ಅವರು ಇಸ್ಲಾಂ ಸ್ವೀಕರಿಸಿದರು.

ಹಝ್ರತ್ ಅಬೂಬಕರ್(ರ)ರ "ಅತೀಖ್" ಎಂಬ ಬಿರುದುನಾಮದ ಕುರಿತು ಹಝ್ರತ್ ಆಯಿಶ(ರ)ರ ಒಂದು ಹೇಳಿಕೆ ಹೀಗಿದೆ: ಒಮ್ಮೆ ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: **ಅಂತ ಅತೀಖುಲ್ಲಾಹಿ ಮಿನನ್ನಾರ್**. ಎಂದರೆ, ನಿನ್ನನ್ನು ಅಲ್ಲಾಹನು ಬೆಂಕಿಯಿಂದ ಸುರಕ್ಷಿತಗೊಳಿಸಿದ್ದಾನೆ. ಅತೀಖ್ ಎಂಬುದು ಅವರ ಹೆಸರಾಗಿತ್ತು ಎಂದು ಕೆಲವು ಚರಿತ್ರೆಗಾರರು ಹೇಳುತ್ತಾರೆ. ಆದರೆ ಇದು ಸರಿಯಲ್ಲ. ಅವರ ಮತ್ತೊಂದು ಬಿರುದುನಾಮವಾದ "ಸಿದ್ದೀಖ್" ಕುರಿತು ಹೀಗೊಂದು ಪ್ರಸ್ತಾಪ ಸಿಗುತ್ತದೆ: ಇಸ್ಲಾಮಿಗೆ ಮುಂಚೆ ಅವರಿಗೆ ಈ ಬಿರುದುನಾಮವನ್ನು ಕೊಡಲಾಗಿತ್ತು. ಹಝ್ರತ್ ಪೈಗಂಬರ್(ಸ)ರ ಸಂದೇಶಗಳನ್ನು ತಕ್ಷಣವೇ ಅಂಗೀಕರಿಸಿದ ಕಾರಣದಿಂದ ಅವರಿಗೆ ಸಿದ್ದೀಖ್ ಎಂಬ ಹೆಸರು ಬಂದಿತ್ತು ಎಂದೂ ಹೇಳಲಾಗುತ್ತದೆ. ಹಝ್ರತ್ ಆಯಿಶ(ರ) ಹೇಳುತ್ತಾರೆ: ರಾತ್ರಿ ಸಮಯದಲ್ಲಿ ಹಝ್ರತ್ ಪೈಗಂಬರ್(ಸ)ರನ್ನು ಬೈತುಲ್‍ಮಖ್‍ದಸ್‍ನ ಕಡೆಗೆ

ಕೊಂಡುಹೋಗಲಾದಾಗ, ಬೆಳಿಗ್ಗೆ ಜನರು ಈ ಕುರಿತು ಮಾತನಾಡಲು ಶುರುಮಾಡಿದರು. ಈ ಕುರಿತು ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ಹಝ್ರತ್ ಅಬೂಬಕರ್(ರ)ರಿಗೆ ಗೊತ್ತಾದಾಗ ಅದೇ ಸತ್ಯವೆಂದು ಅವರು ಹೇಳಿದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಘಟನೆಯನ್ನು ವಿವರಿಸುತ್ತಾ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರ ಮಾತನ್ನು ಹಝ್ರತ್ ಅಬೂಬಕರ್(ರ) ಸತ್ಯಪಡಿಸಿದಾಗ, ಬುದ್ಧಿಗೆ ವಿರುದ್ಧವಾದ ಈ ಮಾತನ್ನು ಕೂಡ ನೀವು ಅಂಗೀಕರಿಸುತ್ತೀರಾ? ಎಂದು ಜನರು ಅವರೊಡನೆ ಕೇಳಿದರು. ಹಝ್ರತ್ ಅಬೂಬಕರ್(ರ) ಹೇಳಿದರು: ಹಗಲು ರಾತ್ರಿ ಅವರಿಗೆ ದಿವ್ಯವಾಣಿಗಳು ಅವತೀರ್ಣವಾಗುತ್ತಿವೆ ಎಂಬ ಮಾತನ್ನು ಕೂಡ ನಾನು ನಂಬುತ್ತೇನೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಅಬೂಬಕರ್(ರ)ರಿಗೆ ಹಝ್ರತ್ ಪೈಗಂಬರ್(ಸ) ಸಿದ್ದೀಖ್ ಎಂಬ ಬಿರುದುನಾಮ ನೀಡಿದಾಗ, ಅವರಲ್ಲಿ ಎಂತೆಲ್ಲ ಶ್ರೇಷ್ಠತೆಗಳಿದ್ದುವು ಎಂದು ಅಲ್ಲಾಹನೇ ಬಲ್ಲನು. ಹಝ್ರತ್ ಅಬೂಬಕರ್(ರ) ತೋರಿಸಿದ ಸತ್ಯಸಂಧತೆಯ ಉದಾಹರಣೆ ಲಭಿಸುವುದು ಕಷ್ಟ.

**"ಅತೀಖ್"** ಮತ್ತು **"ಸಿದ್ದೀಖ್"** ಎಂದಲ್ಲದೇ ಹಝ್ರತ್ ಅಬೂಬಕರ್(ರ)ರ ಇತರ ಬಿರುದುನಾಮಗಳು ಹೀಗಿವೆ: **"ಖಲೀಫತುರ್ರಸೂಲ್", "ಅವ್ವಾಹುನ್"** ಎಂದರೆ ಬಹಳ ತಾಳ್ಮೆಯುಳ್ಳವರು ಮತ್ತು ಸೌಮ್ಯಹೃದಯಿ, **"ಅಮೀರುಶ್ಶಾಕಿರೀನ್"** ಎಂದರೆ ಕೃತಜ್ಞತೆ ಮಾಡುವವರ ಸರದಾರ. **"ಸಾನಿಯಸ್ಸ್ನೈನ್"** ಈ ಬಿರುದುನಾಮದಿಂದ ಅಲ್ಲಾಹನು ಅವರನ್ನು ಕರೆದಿದ್ದನು. ಮದೀನದ ಕಡೆಗೆ ವಲಸೆ ಹೋದ ಘಟನೆಯ ಬಗ್ಗೆ ಅಲ್ಲಾಹನು ಹೀಗೆ ಹೇಳಿದ್ದಾನೆ: **ಇಧ್ ಅಖ್ರಜಹುಲ್ಲಧೀನ ಕಫರೂ ಸಾನಿಯಸ್ಸ್ನೈನಿ ಇಧ್‌ಹುಮಾ ಫಿಲ್ ಗ್ಹಾರಿ ಇಧ್ ಯಖೂಲು ಲಿಸಾಹಿಬಿಹೀ ಲಾ ತಹ್ಝುನ್ ಇನ್ನಲ್ಲಾಹ ಮಅನಾ.** ಎಂದರೆ, ಅವಿಶ್ವಾಸಿಗಳು ಅವರನ್ನು ಊರಿನಿಂದ ಬಹಿಷ್ಕರಿಸಿದಾಗ ದಿಟವಾಗಿಯೂ ಅಲ್ಲಾಹನು ಅವರಿಗೆ ನೆರವಿತ್ತಿದ್ದನು – ಅವರು ಇಬ್ಬರಲ್ಲಿ ಒಬ್ಬರಾಗಿದ್ದರು. ಅವರೀರ್ವರೂ ಆ ಗುಹೆಯಲ್ಲಿದ್ದಾಗ; 'ನೀನು ವ್ಯಥೆಪಡಬೇಡ, ಖಂಡಿತವಾಗಿಯೂ ಅಲ್ಲಾಹನು ನಮ್ಮೊಂದಿಗಿದ್ದಾನೆ' ಎಂದು ಅವರು ತನ್ನ ಸಂಗಡಿಗನೊಡನೆ ಹೇಳಿದ್ದಾಗ. ಆ ಸಂದರ್ಭದಲ್ಲಿ ಅಲ್ಲಾಹನು ತನ್ನ ಕಡೆಯಿಂದಿರುವ ಸಾಂತ್ವನವನ್ನು ಅವರಿಗೆ ಇಳಿಸಿಕೊಟ್ಟನು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲ್ಲಾಹನು ತನ್ನ ಪ್ರವಾದಿ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಕಷ್ಟದಾಯಕ ಸಮಯದಲ್ಲಿ ಮತ್ತು ಪ್ರಯಾಸಕರ ಸ್ಥಿತಿಯಲ್ಲಿ ಹಝ್ರತ್ ಅಬೂಬಕರ್(ರ)ರ ಮುಖಾಂತರ ಸಾಂತ್ವನ ನೀಡಿದನು. **ಅಸ್ಸಿದ್ದೀಖ್** ಎಂಬ ಹೆಸರಿನಿಂದ ಮತ್ತು ಇಹಪರಲೋಕದ ಪ್ರವಾದಿ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಾಮೀಪ್ಯದಿಂದ ಹಝ್ರತ್ ಅಬೂಬಕರ್(ರ)ರನ್ನು ಅಲ್ಲಾಹನು ವಿಶಿಷ್ಟಗೊಳಿಸಿದನು ಹಾಗೂ ಅವರನ್ನು **ಸಾನಿಯಸ್ಸ್ನೈನ್** ಎಂದರೆ ಇಬ್ಬರಲ್ಲಿ ಒಬ್ಬರು ಎಂಬ ಹೆಮ್ಮೆಯ ವಸ್ತ್ರದಿಂದ ಅನುಗ್ರಹಿಸಿದನು... ಈ ರೀತಿಯಲ್ಲಿ ಬೇರೆ ಯಾರನ್ನಾದರೂ ಪವಿತ್ರ ಖುರ್‌ಆನ್ ಪರಿಚಯಪಡಿಸಿದ್ದಾಗಿ ಮತ್ತು ಬೇರೆ ಯಾರದ್ದಾದರೂ ರಹಸ್ಯ ಸ್ಥಿತಿಗಳಿಂದ ಸಂಶಯಗಳ ದಟ್ಟತೆಯನ್ನು ದೂರ ಮಾಡಿದ್ದಾಗಿ ನಿಮಗೆ ಗೊತ್ತಿದೆಯೇ? ಅವರ ಒಂದು ಬಿರುದುನಾಮ **'ಸಾಹಿಬುರ್ರಸೂಲ್'** ಎಂದೂ ಇದೆ. ಒಂದು ಬಾರಿ ಹಝ್ರತ್ ಅಬೂಬಕರ್(ರ)ರ ನಿರ್ದೇಶನ ಪ್ರಕಾರ ಸೂರಃ ತೌಬಃ ಪಾರಾಯಣ ಮಾಡಲಾಯಿತು. ಅದರಲ್ಲಿ **ಇಧ್ ಯಖೂಲು ಲಿಸಾಹಿಬಿಹೀ** ಎಂಬ ಆಯತ್ ಓದಲಾದಾಗ ಅವರು ಅತ್ತುಬಿಟ್ಟರು ಮತ್ತು ಹೀಗೆ ಹೇಳಿದರು: ಅಲ್ಲಾಹನಾಣೆ, ನಾನೇ ಹಝ್ರತ್ ಪೈಗಂಬರ್(ಸ)ರ ಸಂಗಡಿನಾಗಿದ್ದೆ.

ಹಝ್ರತ್ ಅಬೂಬಕರ್(ರ)ರ ಒಂದು ಬಿರುದುನಾಮ **ಆದಮೇ ಸಾನಿ** ಎಂದಾಗಿದೆ. ಈ ಬಿರುದನ್ನು ಅವರಿಗೆ ಹಝ್ರತ್ ಮಸೀಹ್ ಮೌಊದ್(ಅ) ನೀಡಿದ್ದರು. ತನ್ನ ಒಂದು ಬರಹದಲ್ಲಿ ಅವರು ಹೀಗೆ ಬರೆಯುತ್ತಾರೆ: ಅಬೂಬಕರ್(ರ) ಇಸ್ಲಾಮಿನ ಆದಮೇ ಸಾನಿ ಆಗಿರುವರು. ಎಂದರೆ ಎರಡನೇ ಆದಂ. **ಸಿರ್ರುಲ್‌ಖಿಲಾಫ** ಎಂಬ ಗ್ರಂಥದಲ್ಲಿ ಹೀಗೆ ಹೇಳಿದರು: ಅಲ್ಲಾಹನಾಣೆ, ಹಝ್ರತ್ ಅಬೂಬಕರ್(ರ) ಇಸ್ಲಾಮಿಗಾಗಿ ಎರಡನೆ ಆದಂ ಮತ್ತು ಸೃಷ್ಟಿಗಳಲ್ಲಿ ಉತ್ತಮರಾದ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರಕಾಶ ಕಿರಣಗಳ ಮೊದಲ ಪ್ರಕಟಣೆಯಾಗಿದ್ದರು.

ಅವರ ಒಂದು ಬಿರುದು **'ಖಲೀಲುರ್ರಸೂಲ್'** ಎಂದೂ ಇದೆ. ಹಝ್ರತ್ ಪೈಗಂಬರ್(ಸ) ಹೇಳಿದರು: ನಾನು ಯಾರನ್ನಾದರೂ **'ಖಲೀಲ್'** (ನಿಕಟ ಸ್ನೇಹಿತ) ಆಗಿ ಮಾಡುತ್ತಿದ್ದರೆ ಅಬೂಬಕರ್‌ರನ್ನು ಮಾಡುತ್ತಿದ್ದೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಿಕಟ ಸ್ನೇಹಿತ ಮತ್ತು ಗೆಳೆತನ ಎಂಬುದು ನರಗಳ ಮತ್ತು ರೋಮಗಳ ಹಾಸುಹೊಕ್ಕಿನಂತಿರುತ್ತದೆ. ಅದಂತು ಅಲ್ಲಾಹನಿಗೆ ಮಾತ್ರ ಸಾಧ್ಯ ಮತ್ತದು ಅವನದ್ದೇ ವೈಶಿಷ್ಟ್ಯವಾಗಿದೆ. ಹಝ್ರತ್ ಪೈಗಂಬರ್(ಸ)ರ ಈ ಪರಿಶುದ್ಧ ವಾಕ್ಯದ ಅರ್ಥ, ಅಲ್ಲಾಹನ ಪ್ರೀತಿಯಲ್ಲಿ ಬೇರೆ ಭಾಗೀದಾರರು ಇರಲು ಸಾಧ್ಯವಿಲ್ಲ. ಲೋಕದಲ್ಲಿ ನಾನು ಯಾರನ್ನಾದರೂ ಸ್ನೇಹಿತನನ್ನಾಗಿ ಮಾಡುತ್ತಿದ್ದರೆ ಅಬೂಬಕರ್‌ರನ್ನು ಮಾಡುತ್ತಿದ್ದೆ ಎಂದಾಗಿದೆ.

ಅವರ ಉಪನಾಮವಾದ ಅಬೂಬಕರ್ ಎಂಬುದರ ಕುರಿತು ಅನೇಕ ಕಾರಣಗಳು ಹೇಳಲಾಗುತ್ತವೆ. ಉದಾಹರಣೆಗೆ, ಬಕ್ರ್ ಎಂದು ಮಧ್ಯಮ ಪ್ರಾಯದ ಒಂಟೆಯನ್ನು ಕರೆಯಲಾಗುತ್ತದೆ. ಅವರಿಗೆ ಒಂಟೆಗಳ ಪರಿಪಾಲನೆ ಮತ್ತು ಮೇಲ್ನೋಟದಲ್ಲಿ ಅಭಿರುಚಿಯಿದ್ದ ಕಾರಣದಿಂದ ಅವರಿಗೆ ಈ ಉಪನಾಮ ಲಭಿಸಿತು ಎಂದು ಹೇಳಲಾಗುತ್ತದೆ. ಕೆಲವರ ಪ್ರಕಾರ ಅವರು ಇಸ್ಲಾಂ ಸ್ವೀಕರಿಸುವುದರಲ್ಲಿ ಮೊದಲಿಗರಾಗಿದ್ದರು, ಆದ್ದರಿಂದ ಅವರಿಗೆ ಈ ಹೆಸರು ಬಂತು. ಕೆಲವರ ಪ್ರಕಾರ ಅವರು **"ಇಬ್‌ತಿಕಾರ್"** ಎಂದರೆ ಪರಿಶುದ್ಧ ಗುಣಗಳನ್ನು ಕೈಗೊಳ್ಳುವುದರಲ್ಲಿ ಮುಂದಿರುತ್ತಿದ್ದ ಕಾರಣದಿಂದ ಅವರನ್ನು ಅಬೂಬಕರ್ ಎಂದು ಕರೆಯಲಾಯಿತು.

ಹಝ್ರತ್ ಆಯಿಶ(ರ) ಹಝ್ರತ್ ಅಬೂಬಕರ್‌ರ ರೂಪವನ್ನು ಹೀಗೆ ವರ್ಣಿಸುತ್ತಾರೆ: ಅವರು ಬಿಳಿ ಮೈಬಣ್ಣವುಳ್ಳ, ಸಪೂರ ದೇಹದ, ತೆಳ್ಳಗಿನ ಸೊಂಟದ, ವಿಶಾಲವಾದ ಹಣೆಯನ್ನು ಹೊಂದಿದ ವ್ಯಕ್ತಿಯಾಗಿದ್ದರು. ಕೆನ್ನೆಗಳಲ್ಲಿ ಮಾಂಸ ಕಡಿಮೆಯಿತ್ತು ಮತ್ತು ಕಣ್ಣುಗಳು ಒಳಗಾಗಿದ್ದುವು. ಅವರು ಮದರಂಗಿ ಮತ್ತು ಕೈತಮ್ ಎಂಬ ಹೂವಿನಿಂದ ಕೂದಲಿಗೆ ಬಣ್ಣ ಹಚ್ಚುತ್ತಿದ್ದರು. ಅವರು ಸೌಮ್ಯಸ್ವಭಾವದವರು ಮತ್ತು ಸಮುದಾಯದಲ್ಲಿ ಸ್ವೀಕಾರಾರ್ಹ ಮತ್ತು ಪ್ರಿಯ ವ್ಯಕ್ತಿಯಾಗಿದ್ದರು. ಅವರು ವ್ಯಾಪಾರಿಯಾಗಿದ್ದರು ಹಾಗೂ ವ್ಯಾಪಾರದ ವಿಜಯದಲ್ಲಿ ಅವರ ಆಕರ್ಷಣೀಯ ವ್ಯಕ್ತಿತ್ವ ಮತ್ತು ಅತುಲ್ಯವಾದ ನೈತಿಕಗುಣಕ್ಕೆ ಹೆಚ್ಚಿನ ಪಾಲಿತ್ತು. ಹಝ್ರತ್ ಪೈಗಂಬರ್(ಸ) ಪ್ರವಾದಿಯಾಗಿ

ನಿಯೋಜಿತರಾದ ಸಮಯದಲ್ಲಿ ಹಝ್ರತ್ ಅಬೂಬಕರ್(ರ)ರ ಬಂಡವಾಳ ನಲ್ವತ್ತು ಸಾವಿರ ದಿರ್ಹಮ್ ಆಗಿತ್ತು.

ಇಸ್ಲಾಮಿಗೆ ಮುಂಚೆ ಸಹ ಹಝ್ರತ್ ಅಬೂಬಕರ್(ರ) ತನ್ನ ಉನ್ನತ ನೈತಿಕಗುಣ ಮತ್ತು ಸಂಪತ್ತಿನ ಆಧಿಕ್ಯದ ಕಾರಣದಿಂದ ಖುರೈಶಿಗಳ ನಡುವೆ ಉನ್ನತ ಸ್ಥಾನವನ್ನು ಹೊಂದಿದ್ದರು. ಅವರು ಖುರೈಶಿನ ಸರದಾರರಲ್ಲಿ ಒಬ್ಬರಾಗಿದ್ದರು ಮತ್ತು ಸಮಾಲೋಚನೆಯ ಕೇಂದ್ರಬಿಂಧುವಾಗಿದ್ದರು. ಅವರು ಅತ್ಯಂತ ಪರಿಶುದ್ಧ ಮತ್ತು ಸಜ್ಜನರಲ್ಲಿ ಸೇರಿದವರಾಗಿದ್ದರು. ಅವರು ಆದರಣೀಯ ಹಾಗೂ ಉದಾರಿ ನೇತಾರರಾಗಿದ್ದರು ಮತ್ತು ಬಹಳವಾಗಿ ತಮ್ಮ ಸಂಪತ್ತನ್ನು ಖರ್ಚು ಮಾಡುತ್ತಿದ್ದರು. ತನ್ನ ಸಮುದಾಯದಲ್ಲಿ ಎಲ್ಲರಿಗೂ ಪ್ರಿಯ ಮತ್ತು ಇಷ್ಟಕರ ವ್ಯಕ್ತಿಯಾಗಿದ್ದರು. ಸ್ವಪ್ನವ್ಯಾಖ್ಯಾನದ ಆಳವಾದ ಅರಿವು ಅವರಿಗೆ ಇತ್ತು. ಅದೇ ರೀತಿಯಲ್ಲಿ ಅವರು ವಂಶಾವಳಿ ಕುರಿತ ಜ್ಞಾನದಲ್ಲಿ ಪರಿಣತರಾಗಿದ್ದರು. ಇಸ್ಲಾಮಿಗೆ ಮುಂಚೆ ಪರಿಹಾರಧನವನ್ನು ಒಟ್ಟುಗೂಡಿಸುವ ಜವಾಬ್ದಾರಿ ಬನೂತೈಮ್ ಬಿನ್ ಮುರ್ರ ಸಮುದಾಯದ್ದಾಗಿತ್ತು. ಹಝ್ರತ್ ಅಬೂಬಕರ್(ರ) ಯುವಕರಾದಾಗ ಆ ಸೇವೆ ಅವರಿಗೆ ಒಪ್ಪಿಸಲಾಯಿತು. ನಿರ್ಗತಿಕರ ಮತ್ತು ಪೀಡಿತರಿಗೆ ನೆರವು ನೀಡುವುದಾಗಿ ಮಾಡಲಾದ ಒಪ್ಪಂದ **"ಹಿಲ್ಫುಲ್ ಫುಝೂಲ್"**ನಲ್ಲೂ ಅವರು ಸೇರಿದ್ದರು. ಹಝ್ರತ್ ಪೈಗಂಬರ್(ಸ) ಪ್ರವಾದಿಯಾಗಿ ನಿಯೋಜಿತರಾಗುವುದಕ್ಕೆ ಮುಂಚಿತವಾಗಿಯೇ ಅವರಿಗೆ ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ವಿಶೇಷವಾದ ಪ್ರೀತಿ ಮತ್ತು ನಿಷ್ಠೆಯ ಸಂಬಂಧವಿತ್ತು. ವ್ಯಾಪಾರಕ್ಕೆ ಸಂಬಂಧಿಸಿದ ಹೆಚ್ಚಿನ ಯಾತ್ರೆಗಳಲ್ಲೂ ಅವರಿಗೆ ಪ್ರವಾದಿಯ ಸಹಯಾತ್ರಿಕನಾಗುವ ಸೌಭಾಗ್ಯ ಲಭಿಸಿತ್ತು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರೊಂದಿಗೆ ಸಂಬಂಧದಲ್ಲಿ ಹಝ್ರತ್ ಅಬೂಬಕರ್(ರ) ಮೊದಲಿಗರಾಗಿದ್ದರು. ಇಸ್ಲಾಮಿಗೆ ಮುಂಚೆನಿಂದಲೂ ಅವರಿಗೆ ಬಹುದೇವಾರಾಧನೆ ಇಷ್ಟವಾಗಿರಲಿಲ್ಲ. ಎಂದಿಗೂ ಯಾವುದೇ ಮೂರ್ತಿಯ ಮುಂದೆ ಸಾಷ್ಟಾಂಗ ಮಾಡಿರಲಿಲ್ಲ. ಅದೇ ರೀತಿಯಲ್ಲಿ ಇಸ್ಲಾಮಿಗೆ ಮುಂಚೆನಿಂದಲೇ ಅವರು ಮದ್ಯಪಾನವನ್ನು ಅನಿಷ್ಟತೆಯಿಂದ ಕಾಣುತ್ತಿದ್ದರು.

ಹಝ್ರತ್ ಅಬೂಬಕರ್(ರ)ರ ಇಸ್ಲಾಂ ಸ್ವೀಕಾರದ ಕುರಿತು ಹೀಗೆ ಪ್ರಸ್ತಾಪ ಲಭಿಸುತ್ತದೆ: ಒಂದು ದಿನ ಹಝ್ರತ್ ಅಬೂಬಕರ್(ರ) ಹಝ್ರತ್ ಹಕೀಂ ಬಿನ್ ಹಝ್ಝಾಮರ ಮನೆಯಲ್ಲಿದ್ದರು. ಮುಹಮ್ಮದ್(ಸ)ರನ್ನು ಮೂಸಾ(ಅ)ರ ಹಾಗೆ ನಬಿಯಾಗಿ ನಿಯೋಗಿಸಲಾಗಿದೆ ಎಂದು ನಿಮ್ಮ ತಂದೆಯ ಸಹೋದರಿಯಾದ ಖದೀಜ ತನ್ನ ಗಂಡನ ಕುರಿತು ಹೇಳುತ್ತಿದ್ದಾರೆ ಎಂದು ಹಕೀಮರ ದಾಸಿ ಅಲ್ಲಿಗೆ ಬಂದು ಹೇಳಿದರು. ಆಗ ಹಝ್ರತ್ ಅಬೂಬಕರ್(ರ) ಮೌನವಾಗಿ ಅಲ್ಲಿಂದ ಎದ್ದು ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು ಇಸ್ಲಾಂ ಸ್ವೀಕರಿಸಿದರು.

ಸೀರತ್ ಇಬ್ನು ಹಿಶಾಮಿನ ವ್ಯಾಖ್ಯಾನವಾದ **ಅರ್ರೌಝುಲ್ ಅನ್**ಫಿಯಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ: ಚಂದ್ರನು ಮಕ್ಕದಲ್ಲಿ ಇಳಿದು, ತುಂಡುತುಂಡಾಗಿ ಎಲ್ಲ ಸ್ಥಳಗಳಲ್ಲಿ ಮತ್ತು ಎಲ್ಲ ಮನೆಗಳಲ್ಲಿ ಹರಡಿರುವುದಾಗಿಯೂ ಅನಂತರ ಆ ಚಂದ್ರನನ್ನು ಅವರ ಮಡಿಲಲ್ಲಿ ಒಟ್ಟುಗೂಡಿಸಲಾಗಿದ್ದಾಗಿಯೂ ಹಝ್ರತ್ ಅಬೂಬಕರ್(ರ) ಕನಸಿನಲ್ಲಿ ಕಂಡಿದ್ದರು. ಹಝ್ರತ್ ಅಬೂಬಕರ್(ರ) ವ್ಯಾಪಾರಕ್ಕಾಗಿ ಸಿರಿಯಗೆ ಹೋಗಿದ್ದಾಗ ಈ ಕನಸನ್ನು ಕಂಡಿದ್ದರು ಎಂದು ಸಬಲುಲ್‌ಹುದಾದಲ್ಲಿ ಪ್ರಸ್ತಾಪಿಸಲಾಗಿದೆ. ಬುಹೈರ ರಾಹಿಬ್ ಈ ಕನಸನ್ನು ಹೀಗೆ ವ್ಯಾಖ್ಯಾನಿಸಿರುವರು: ನಿಮ್ಮ ಸಮುದಾಯದಲ್ಲಿ ಒಬ್ಬ ಪ್ರವಾದಿ ಆಗಮಿಸುವರು. ನೀವು ಅವರ ಜೀವಿತದಲ್ಲಿ ಅವರ ಕಾರ್ಯದರ್ಶಿ (ಮಂತ್ರಿ) ಆಗುವಿರಿ. ಅವರ ಮರಣದ ನಂತರ ನೀವು ಅವರ ಉತ್ತರಾಧಿಕಾರಿಯಾಗುವಿರಿ.

(ಖುತ್ಬದ ಕೊನೆಯಲ್ಲಿ ಹುಝೂರ್ ಹೇಳಿದರು:) ಈ ಕುರಿತು ಹೆಚ್ಚಿನ ವರದಿಗಳೂ ಇವೆ. ಅವುಗಳನ್ನು ಮುಂದಿನ ಬಾರಿ ಪ್ರಸ್ತಾಪಿಸಲಾಗುವುದು. ಇನ್‌ಶಾ ಅಲ್ಲಾಹ್.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***

*At, Masjid Mubarak, Islamabad, Tilford, UK, On 03-12-2021*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon